

ಅಪ್ಪ ಸತ್ತಾಗ ನನಗೆ ಅಳು ಬರಲಿಲ್ಲ. ಅಳುವುದಕ್ಕೇನು ಉಳಿದಿತ್ತು? ಕಣ್ಣೀರು ಪೂರ್ತಿ ಬತ್ತಿ ಹೋಗಿತ್ತು. ಇಷ್ಟಾಗಿ ನನ್ನ ಜೊತೆಗೆ ಅಳು ಹಂಚಿಕೊಳ್ಳುವುದಕ್ಕಾದರೂ ಅಲ್ಲಿ ಯಾರೂ ಇರಲಿಲ್ಲ.

ಬಸ್ಸು ಒಮ್ಮೆ ಜಂಪ್ ಆಗಿ ನಾನು ಮೇಲಕ್ಕೆ ಹಾರಿ ಮತ್ತೆ ಸ್ವಸ್ಥಾನದಲ್ಲಿ ಕುಳಿತೆ. ನೆನಪು ಮತ್ತೆ ಮರುಕಳಿಸಿತು.

ಅಪ್ಪನಿಗೆ ಕೊನೆಯವರೆಗೂ ಒಂದು ದುಃಖವಿತ್ತು. ಅನುಕೂಲವಾಗಿರುವ ತನ್ನ ಮಕ್ಕಳೆಲ್ಲ ಕೊನೆಗಾಲದಲ್ಲಿ ತನ್ನ ಸಹಾಯಕ್ಕೆ ಬರದೇ ಕೈಬಿಟ್ಟು ಹೋದರಲ್ಲ ಎನ್ನುವ ಮಾನಸಿಕ ನೋವು ಅಪ್ಪನಿಗೆ ದೈಹಿಕ ನೋವಿಗಿಂತ ಜಾಸ್ತಿಯಾಗಿತ್ತು. ಹತ್ತಿರ ಇರುವವನು ನಾನೊಬ್ಬನೇ. ಉಳಿದವರೆಲ್ಲ ಬಲು ದೂರ ಇದ್ದಾರೆ. ಅಪ್ಪನ ಮನಸ್ಸಿನಿಂದ ಮೈಲುಗಟ್ಟಲೆ ಬಹಳ ದೂರ...

ಕಾರಣ ಇಲ್ಲಿ ವಿಶ್ಲೇಷಿಸುವಷ್ಟು ಚಿಕ್ಕದಲ್ಲ. ಮದುವೆಯಾದ ಮೇಲೆ ಅವರವರ ಸುಖ ಅವರವರು ಕಂಡುಕೊಂಡಿದ್ದರು ಎಂದಷ್ಟೇ ಹೇಳಿದರೆ ಸಾಕು. ಒಂದು ಕಾದಂಬರಿಯಷ್ಟು ವಿವರಣೆ ಅಗತ್ಯವಿಲ್ಲ.

***

ಒಂದು ಹೆಣ್ಣು ಮಗು ಬೇಕು ಎಂಬ ಅಪ್ಪನ ಹಟದಿಂದಾಗಿ ಒಂದಾದ ಮೇಲೊಂದು ಹುಟ್ಟಿದ್ದು ಮೂವರು ಗಂಡು ಮಕ್ಕಳು. ನಾಲ್ಕನೆಯದು ಹೆಣ್ಣಾಗಿತ್ತು. ಆದರೆ ತಾಯಿ ಮಗಳು ಇಬ್ಬರೂ ಉಳಿಯಲಿಲ್ಲ ಎನ್ನುವುದೇ ದುರ್ದೈವ. ಯಾಕೆಂದರೆ ಆ ಹೆರಿಗೆ ಆಗಿದ್ದು ನಮ್ಮ ಹಳ್ಳಿ ಮನೆಯ ದನದ ಕೊಟ್ಟಿಗೆಯಲ್ಲಿ. ಆ ಕಾಲದಲ್ಲಿ ನಮ್ಮ ಹಳ್ಳಿಗಳಲ್ಲಿ ಮನೆಯ ಹೊರಗಡೆ ಒಂದು ಶಾಮಿಯಾನ ಕಟ್ಟಿ, ಸೂಲಗಿತ್ತಿಯ ಮೂಲಕ ಹೆರಿಗೆ ಮಾಡಿಸುತ್ತಿದ್ದರು.

ಗಂಜಳ ಹರಿಯುವ ಕಾಲುವೆಯಲ್ಲಿ ನೂರಡಿ ದೂರದವರೆಗೂ ರಕ್ತ ಹರಿದಿದ್ದನ್ನು ನೋಡಿ ನನ್ನ ಮೈ ಝುಂ ಎಂದಿತ್ತು. ಅಬ್ಬಾ ಹೆರಿಗೆ ಎಂದರೆ ಇಷ್ಟೊಂದು ಕಷ್ಟವಾ ಎಂದು ಹೆದರಿಬಿಟ್ಟಿದ್ದೆ. ಹೆಣ್ಣುಮಗು ಇಲ್ಲದಿದ್ದರೂ ಪಿಂಡ ಹಾಕಲು ಗಂಡು ಮಕ್ಕಳಿದ್ದಾರೆ ಎನ್ನುವ ಖುಷಿ ಅಪ್ಪನಿಗಿತ್ತು.

***

ಅಪ್ಪನಿಗಿದ್ದದ್ದೊಂದು ಚಿಕ್ಕ ಮಾಸ್ತರಿಕೆ ಕೆಲಸ, ಒಂದೆಕರೆ ಗದ್ದೆ ಹಾಗೂ ಒಂದು ಹಳೆಯ ಮುರುಕಲು ಮನೆ. ಹೇಗೋ ಕಷ್ಟಪಟ್ಟು ಜೀವನ ಸಾಗುತ್ತಿತ್ತು. ಆದರೆ ಮಕ್ಕಳನ್ನು ಚೆನ್ನಾಗಿ ಬೆಳೆಸಬೇಕೆಂಬುದೇ ಅವನ ಅದಮ್ಯ ಬಯಕೆ. ಯಾರೂ ತನ್ನಂತೆ ಆಗಬಾರದೆಂಬ ದೃಷ್ಟಿಯಿಂದ ಅಣ್ಣಂದಿರನ್ನು ಓದಿಸಿ ವಿದ್ಯಾವಂತರನ್ನಾಗಿ ಮಾಡುವಷ್ಟರಲ್ಲಿ ಅಪ್ಪ ಮೈ ತುಂಬಾ ಸಾಲ ಮಾಡಿಕೊಂಡು ಹೈರಾಣಾಗಿಬಿಟ್ಟ.

ಅಪ್ಪ ತನಗಾಗಿ ಏನೂ ಆಸ್ತಿ ಮಾಡಿಕೊಳ್ಳಲಿಲ್ಲ. ಮಕ್ಕಳೇ ತನ್ನ 'ಆಸ್ತಿ' ಎಂದು ತಿಳಿದುಕೊಂಡು ತನಗಾಗಿ ಉಳಿಸಿಕೊಂಡಿದ್ದು ಕೇವಲ ತನ್ನ 'ಅಸ್ತಿ'ಯನ್ನು ಮಾತ್ರ. ಬದಲಾದ ಕಾಲವನ್ನು ಅರ್ಥ ಮಾಡಿಕೊಳ್ಳಲೇ ಇಲ್ಲ. ಅದೇ ಅವನು ಮಾಡಿದ ದೊಡ್ಡ ತಪ್ಪು. ಮಕ್ಕಳಿಗಾಗಿ ಮಾಡಿದ